Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜಪತ್ರ

( **EXTRAORDINARY** )
( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं. १ | नई दिल्ली, सोमवार, जून ८, २०२० | ज्येष्ठ २६, १९४२ (शका) | खंड ५० |
| No. 1 | New Delhi, Monday, June 8, 2020 | Jyeshta 26, 1942 (Saka) | Vol. 50 |
| ನಂ. ೧ | ನವ ದೆಹಲಿ, ಸೋಮವಾರ, ಜೂನ್ ೮, ೨೦೨೦ | ಜ್ಯೇಷ್ಠ ೨೬, ೧೯೪೨ (ಶಕ) | ಸಂಪುಟ ೫೦ |

**Ministry of Law and Justice**
Legislative Department
New Delhi, 08th June, 2020

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**ವಿಧಾಯೀ ಇಲಾಖೆ**
**ನವದೆಹಲಿ, 08ನೇ ಜೂನ್ 2020**

The Translation in Kannada of the following Acts, namely:- (1) The Official Trustees Act, 1913 (2 of 1913) (2) The Factories Act, 1948 (63 of 1948) (3) The Chit Funds Act, 1982 ( 40 of 1982) (4) The Sexual Harassment of Women at Work Place (Prevention, Prohibition and Redressal) Act, 2013 (14 of 2013) (5) The National Food Security Act, 2013 (20 of 2013) - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಅಧಿಕೃತ ನ್ಯಾಸಧಾರಿಗಳ ಅಧಿನಿಯಮ, 1913 (1913ರ 2) (2) ಕಾರ್ಖಾನೆಗಳ ಅಧಿನಿಯಮ, 1948 (1948ರ 63) (3) ಚಿಟ್ ಫಂಡ್‌ಗಳ ಅಧಿನಿಯಮ, 1982 (1982ರ 40) (4) ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ಪ್ರತಿಬಂಧ, ನಿವಾರಣೆ ಮತ್ತು ಪರಿಹಾರ) ಅಧಿನಿಯಮ, 2013 (2013ರ 14) (5) ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ, 2013 (2013ರ 20)– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಅಧಿಕೃತ ನ್ಯಾಸಧಾರಿಗಳ ಅಧಿನಿಯಮ, 1913

## (1913ರ ಅಧಿನಿಯಮ ಸಂಖ್ಯೆ 2)

[27ನೇ ಫೆಬ್ರವರಿ 1913]

ಅಧಿಕೃತ ನ್ಯಾಸಧಾರಿ ಹುದ್ದೆಯನ್ನು ರಚಿಸುವ ಕಾನೂನನ್ನು ಕ್ರೋಡೀಕರಿಸಲು ಮತ್ತು ತಿದ್ದುಪಡಿ ಮಾಡಲು ಅಧಿನಿಯಮ. ಇದನ್ನು ಈ ಮೂಲಕ, ಈ ಮುಂದಿನಂತೆ ಅಧಿನಿಯಮಿತಗೊಳಿಸಲಾಗಿದೆ:-

### ಭಾಗ -I
### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಅಧಿಕೃತ ನ್ಯಾಸಧಾರಿಗಳ ಅಧಿನಿಯಮ, 1913 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದಾದ * ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಅರ್ಥ ವಿವರಣೆ ಖಂಡ.**- ಈ ಅಧಿನಿಯಮದಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,-

(1) ಯಾವುದೇ ರಾಜ್ಯಕ್ಕೆ ಸಂಬಂಧಿಸಿದಂತೆ "ಸರ್ಕಾರ" ಎಂದರೆ ಆ ರಾಜ್ಯ ಸರ್ಕಾರ ಮತ್ತು ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ "ಸರ್ಕಾರ" ಎಂದರೆ ಕೇಂದ್ರ ಸರ್ಕಾರ.

* * * * * * *

(3) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗಿನ ನಿಯಮಗಳ ಮೂಲಕ ನಿಯಮಿಸಲಾದುದು.

3. **ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿ.**- ಈ ಅಧಿನಿಯಮ ಅಥವಾ ಭಾರತ ನ್ಯಾಸ ಅಧಿನಿಯಮ 1882ರ (1882ರ 2) ಮೇರೆಗೆ ಅಧಿಕೃತ ನ್ಯಾಸಧಾರಿಯು ಹೂಡಿದ ಅಥವಾ ಅವನ ವಿರುದ್ಧ ಹೂಡಲಾದ ವ್ಯವಹರಣೆಗಳ ಸಂಬಂಧದಲ್ಲಿ ಉಚ್ಚ ನ್ಯಾಯಾಲಯವು, ಅದು ಯಾವ ರಾಜ್ಯ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಿವಿಲ್ ಅಪೀಲು ವಿಚಾರಣಾ ಅಧಿಕಾರವ್ಯಾಪ್ತಿಯನ್ನು ಚಲಾಯಿಸುತ್ತದೆಯೋ ಆ ರಾಜ್ಯ ಕ್ಷೇತ್ರಗಳಾದ್ಯಂತ ಸಕ್ಷಮ ನ್ಯಾಯಾಲಯವಾಗಿರತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದು ಯ್ಣಾವುದೂ ಯಾವುದೇ ಜಿಲ್ಲಾ ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಬಾಧಕವಾಗುತ್ತದೆಂದು ಅರ್ಥೈಸತಕ್ಕದ್ದಲ್ಲ.

### ಭಾಗ-II
### ಅಧಿಕೃತ ನ್ಯಾಸಧಾರಿಯ ಹುದ್ದೆ

**4. ಅಧಿಕೃತ ನ್ಯಾಸಧಾರಿಗಳು.**- (1) ಸರ್ಕಾರವು ಪ್ರತಿಯೊಂದು ರಾಜ್ಯಕ್ಕೆ ಅಧಿಕೃತ ನ್ಯಾಸಧಾರಿಯನ್ನು ನೇಮಕ ಮಾಡತಕ್ಕದ್ದು:

ಪರಂತು, ಇದರಲ್ಲಿ ಏನೇ ಒಳಗೊಂಡಿರುವುದು ಯಾವುದು, ಎರಡು ಅಥವಾ ಹೆಚ್ಚು ರಾಜ್ಯಗಳಿಗೆ ಒಬ್ಬನೇ ಅಧಿಕೃತ ನ್ಯಾಸಧಾರಿಯನ್ನು ನೇಮಕ ಮಾಡಲು ಪ್ರತಿಷೇಧಿಸುತ್ತದೆಂದು ಭಾವಿಸತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು, ಕನಿಷ್ಠ ಪಕ್ಷ,-

(ಎ) ವಕೀಲನಾಗಿ ಏಳು ವರ್ಷ; ಅಥವಾ

(ಬಿ) ಉಚ್ಚ ನ್ಯಾಯಾಲಯದ ಅಟಾರ್ನಿಯಾಗಿ ಏಳು ವರ್ಷ; ಅಥವಾ

(ಸಿ) ರಾಜ್ಯ ನ್ಯಾಯಿಕ ಸೇವೆಯಲ್ಲಿ ಹತ್ತು ವರ್ಷ; ಅಥವಾ

(ಡಿ) ಉಪ ಅಧಿಕೃತ ನ್ಯಾಸಧಾರಿಯಾಗಿ ಐದು ವರ್ಷ;

– ಸೇವೆ ಸಲ್ಲಿಸಿದ ಹೊರತು, ಅವನನ್ನು ಅಧಿಕೃತ ನ್ಯಾಸಧಾರಿಯ ಹುದ್ದೆಗೆ ನೇಮಕ ಮಾಡತಕ್ಕದ್ದಲ್ಲ.

---

* ಏಪ್ರಿಲ್ 01, 1914ರಿಂದ ಜಾರಿಗೆ ಬಂದಿದೆ. ಅಧಿಸೂಚನೆ ಸಂಖ್ಯೆ. 1801-ಸಿ, ದಿನಾಂಕ: 13ನೇ ಮಾರ್ಚ್, 1914, ಭಾರತ ರಾಜಪತ್ರ, 1914, ಭಾಗ - I, ಪುಟ - 365 ನೋಡಿ.

**5. ಉಪ ಅಧಿಕೃತ ನ್ಯಾಸಧಾರಿಯ ನೇಮಕ ಮತ್ತು ಅಧಿಕಾರಗಳು.–** (1) ಸರ್ಕಾರವು, ಅಧಿಕೃತ ನ್ಯಾಸಧಾರಿಗೆ ಸಹಾಯ ಮಾಡಲು ಉಪ ಅಧಿಕೃತ ನ್ಯಾಸಧಾರಿಯನ್ನು ಅಥವಾ ಉಪ ಅಧಿಕೃತ ನ್ಯಾಸಧಾರಿಗಳನ್ನು ನೇಮಕ ಮಾಡಬಹುದು ಮತ್ತು ಹಾಗೆ ನೇಮಕಗೊಂಡ ಯಾರೇ ಉಪ ಅಧಿಕೃತ ನ್ಯಾಸಾಧಾರಿಯು ಸರ್ಕಾರದ ನಿಯಂತ್ರಣಕ್ಕೆ ಮತ್ತು ಅಧಿಕೃತ ನ್ಯಾಸಾಧಾರಿಯ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಒಳಪಟ್ಟು ಅಧಿಕೃತ ನ್ಯಾಸಧಾರಿಯ ಯಾವುವೇ ಕರ್ತವ್ಯಗಳನ್ನು ನಿರ್ವಹಿಸಲು ಮತ್ತು ಯಾವುವೇ ಅಧಿಕಾರಗಳನ್ನು ಚಲಾಯಿಸಲು ಸಕ್ಷಮರಾಗಿರತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸುವಾಗ ಅಥವಾ ಅಂಥ ಅಧಿಕಾರಗಳನ್ನು ಚಲಾಯಿಸುವಾಗ ಅಧಿಕೃತ ನ್ಯಾಸಧಾರಿಯು ಹೊಂದಿರುವಂತಹವೇ ವಿಶೇಷಾಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅದೇ ಬಾಧ್ಯತೆಗಳಿಗೆ ಒಳಪಟ್ಟಿರತಕ್ಕದ್ದು.

(2) ಯಾರೇ ವ್ಯಕ್ತಿಯು, ಕನಿಷ್ಠ ಮೂರು ವರ್ಷಗಳ ಕಾಲ

ಎ) ವಕೀಲನಾಗಿದ್ದ ಹೊರತು; ಅಥವಾ

ಬಿ) ಉಚ್ಚ ನ್ಯಾಯಾಲಯದ ಅಟಾರ್ನಿಯಾಗಿದ್ದ ಹೊರತು; ಅಥವಾ

ಸಿ) ರಾಜ್ಯದ ನ್ಯಾಯಿಕ ಸೇವೆಯ ಸದಸ್ಯನಾಗಿದ್ದ ಹೊರತು

– ಅವನನ್ನು ಉಪ ಅಧಿಕೃತ ನ್ಯಾಸಧಾರಿಯಾಗಿ ನೇಮಕ ಮಾಡತಕ್ಕದ್ದಲ್ಲ.

**6. ಅಧಿಕೃತ ನ್ಯಾಸಧಾರಿಯು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಅಧಿಕೃತ ಮೊಹರನ್ನು ಹೊಂದಿರುವ ಏಕಮೇವ ನಿಗಮವಾಗಿರುವುದು, ಮತ್ತು ತನ್ನ ನಿಗಮಿತ ಹೆಸರಿನಲ್ಲಿ ದಾವೆ ಹೂಡುವುದು ಮತ್ತು ದಾವೆಗೆ ಗುರಿಯಾಗುವುದು.–** ಅಧಿಕೃತ ನ್ಯಾಸಧಾರಿಯು, ಅವನನ್ನು ಯಾವ ರಾಜ್ಯಕ್ಕೆ ನೇಮಕ ಮಾಡಲಾಗಿದೆಯೋ ಆ ರಾಜ್ಯದ ಅಧಿಕೃತ ನ್ಯಾಸಧಾರಿಯ ಹೆಸರಿನ ಏಕಮೇವ ನಿಗಮವಾಗಿರತಕ್ಕದ್ದು ಮತ್ತು ಅಂಥ ಅಧಿಕೃತ ನ್ಯಾಸಧಾರಿಯಾಗಿ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಅಧಿಕೃತ ಮೊಹರನ್ನು ಹೊಂದಿರತಕ್ಕದ್ದು ಮತ್ತು ಅವನು ತನ್ನ ನಿಗಮಿತ ಹೆಸರಿನಲ್ಲಿ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

## ಭಾಗ –III

## ಅಧಿಕೃತ ನ್ಯಾಸಧಾರಿಯ ಹಕ್ಕುಗಳು, ಅಧಿಕಾರಗಳು, ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು

**7. ಅಧಿಕೃತ ನ್ಯಾಸಧಾರಿಯ ಸಾಮಾನ್ಯ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಒಳಪಟ್ಟು ಮತ್ತು ಅವುಗಳಿಗೆ ಅನುಸಾರವಾಗಿ ಅಧಿಕೃತ ನ್ಯಾಸಧಾರಿಯು,

(ಎ) ತಾನು ಸೂಕ್ತವೆಂದು ಭಾವಿಸಿದರೆ ಸಾಮಾನ್ಯ ನ್ಯಾಸಧಾರಿಯಾಗಿ ಕಾರ್ಯ ನಿರ್ವಹಿಸಬಹುದು;

(ಬಿ) ಸಕ್ಷಮ ಅಧಿಕಾರವ್ಯಾಪ್ತಿ ಹೊಂದಿರುವ ನ್ಯಾಯಾಲಯದಿಂದ ನ್ಯಾಸಧಾರಿಯಾಗಿ ನೇಮಕಗೊಳ್ಳಬಹುದು.

(2) ಇದರಲ್ಲಿ ಇನ್ನು ಮುಂದೆ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು, ಅಧಿಕೃತ ನ್ಯಾಸಧಾರಿಯು, ಅದೇ ಸಾಮರ್ಥ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಯಾರೇ ಇತರ ನ್ಯಾಸಧಾರಿಯಂತೆ ಅವೇ ಅಧಿಕಾರಗಳನ್ನು, ಕರ್ತವ್ಯಗಳನ್ನು ಮತ್ತು ಹೊಣೆಗಾರಿಕೆಗಳನ್ನು ಹೊಂದಿರತಕ್ಕದ್ದು ಮತ್ತು ಅವೇ ಹಕ್ಕುಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು ಮತ್ತು ನ್ಯಾಯಾಲಯದ ಅದೇ ನಿಯಂತ್ರಣಕ್ಕೆ ಮತ್ತು ಆದೇಶಗಳಿಗೆ ಒಳಪಟ್ಟಿರತಕ್ಕದ್ದು.

(3) ಅಧಿಕೃತ ನ್ಯಾಸಧಾರಿಯು, ಯಾವುದೇ ನ್ಯಾಸವನ್ನು ಒಪ್ಪಿಕೊಳ್ಳಲು ಸಂಪೂರ್ಣವಾಗಿಯಾಗಲಿ ಅಥವಾ ತಾನು ವಿಧಿಸಬಹುದಾದಂತಹ ಷರತ್ತುಗಳ ಮೇಲೆ ಹೊರತು ನಿರಾಕರಿಸಬಹುದು.

(4) ಅಧಿಕೃತ ನ್ಯಾಸಧಾರಿಯು, ಸಾಲಗಾರರ ಪ್ರಯೋಜನಕ್ಕಾಗಿ ಯಾವುದೇ ರಾಜಿ ಒಪ್ಪಂದದ ಅಥವಾ ವ್ಯವಸ್ಥೆ ಯೋಜನೆಯ ಮೇರೆಗೆ ಯಾವುದೇ ನ್ಯಾಸವನ್ನು ಅಥವಾ ದಿವಾಳಿಯೆಂದು ತನಗೆ ಗೊತ್ತಿರುವ ಅಥವಾ ತಾನು ನಂಬಿರುವ ಯಾವುದೇ ಎಸ್ಟೇಟ್‌ನ್ನು ಒಪ್ಪಿಕೊಳ್ಳತಕ್ಕದ್ದಲ್ಲ.

(5) ಅಧಿಕೃತ ನ್ಯಾಸಧಾರಿಯು, ಈ ಅಧಿನಿಯಮದ ಮೇರೆಗೆ ರಚಿಸಿ ಯಾವುದೇ ನಿಯಮಗಳ ಮೂಲಕ ಉಪಬಂಧಿಸುದುದನ್ನುಳಿದು, ಧಾರ್ಮಿಕ ಉದ್ದೇಶಗಳಿಗಾಗಿ ಇರುವ ಯಾವುದೇ ನ್ಯಾಸವನ್ನು ಅಥವಾ ಯಾವುದೇ ವ್ಯವಹಾರದ ಆಡಳಿತವನ್ನು ಅಥವಾ ನಿರ್ವಹಣೆಯನ್ನು ಒಳಗೊಂಡಿರುವಂಥ ಯಾವುದೇ ನ್ಯಾಸವನ್ನು ಒಪ್ಪಿಕೊಳ್ಳತಕ್ಕದ್ದಲ್ಲ.

(6) ಅಧಿಕೃತ ನ್ಯಾಸಧಾರಿಯು, ಮೃತ ವ್ಯಕ್ತಿಯ ಉಯಿಲಿನ ಏಕಮೇವ ಕಾರ್ಯನಿರ್ವಾಹಕನಾಗಿ ಮತ್ತು ಅಂಥ ಉಯಿಲಿನ ಮೂಲಕ ಏಕಮೇವ ನ್ಯಾಸಧಾರಿಯಾಗಿ ಅವನನ್ನು ಸ್ಪಷ್ಟವಾಗಿ ನೇಮಕ ಮಾಡಿದ್ದ ಹೊರತು ಆ ಮೃತವ್ಯಕ್ತಿಯ ಸಂಪದದ ನಿರ್ವಹಣೆ ಮಾಡತಕ್ಕದ್ದಲ್ಲ.

(7) ಅಧಿಕೃತ ನ್ಯಾಸಧಾರಿಯು, ಯಾವಾಗಲೂ ಏಕಮೇವ ನ್ಯಾಸಧಾರಿಯಾಗಿರತಕ್ಕದ್ದು ಮತ್ತು ಅಧಿಕೃತ ನ್ಯಾಸಧಾರಿಯನ್ನು ಯಾರೇ ಇತರ ವ್ಯಕ್ತಿಯೊಡನೆ ನ್ಯಾಸಧಾರಿಯಾಗಿ ನೇಮಕ ಮಾಡುವುದು ಕಾನೂನುಬದ್ಧವಾಗಿರತಕ್ಕದ್ದಲ್ಲ.

**8. ದಾನಿಯು ಅಧಿಕೃತ ನ್ಯಾಸಧಾರಿಯನ್ನು ಅವನ ಸಮ್ಮತಿಯೊಂದಿಗೆ ಆಸ್ತಿ ವ್ಯವಸ್ಥೆಯ ನ್ಯಾಸಧಾರಿಯನ್ನಾಗಿ ನೇಮಕ ಮಾಡುವುದು.–** (1) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವ ನ್ಯಾಸವನ್ನು ಒಪ್ಪಿಕೊಳ್ಳಲು ಅಧಿಕೃತ ನ್ಯಾಸಧಾರಿಯನ್ನು ಪ್ರತಿಬಂಧಿಸಲಾಗಿದೆಯೋ ಅಂಥ ನ್ಯಾಸವನ್ನು ಹೊರತುಪಡಿಸಿದ ಇತರ ನ್ಯಾಸವನ್ನು ಸೃಜಿಸಲು ಉದ್ದೇಶಿಸಿರುವ ಯಾರೇ ವ್ಯಕ್ತಿಯು

ನ್ಯಾಸ ಸೃಜಿಸುವ ಲಿಖಿತಪತ್ರದ ಮೂಲಕ ಮತ್ತು ಅಧಿಕೃತ ನ್ಯಾಸಧಾರಿಯ ಸಮ್ಮತಿಯೊಂದಿಗೆ ಅವನನ್ನು ಆ ಹೆಸರಿನಲ್ಲಿ ಅಥವಾ ಯಾವುದೇ ಇತರ ಸಾಕಷ್ಟು ವಿವರಣೆ ಕೊಟ್ಟು ಅಂಥ ನ್ಯಾಸಕ್ಕೆ ಸೇರಿದ ಸ್ವತ್ತಿನ ನ್ಯಾಸಧಾರಿಯಾಗಿ ನೇಮಕ ಮಾಡಬಹುದು:

ಪರಂತು, ಅಧಿಕೃತ ನ್ಯಾಸಧಾರಿಯ ಸಮ್ಮತಿಯನ್ನು ಸದರಿ ಲಿಖಿತದಲ್ಲಿ ಹೇಳಿರತಕ್ಕದ್ದು ಮತ್ತು ಅಂಥ ಪತ್ರವನ್ನು ಅಧಿಕೃತ ನ್ಯಾಸಧಾರಿಯು ವಿಧ್ಯುಕ್ತವಾಗಿ ಜಾರಿಮಾಡತಕ್ಕದ್ದು.

(2) ಹಾಗೆ ನೇಮಕ ಮಾಡಿದ ನಂತರ ನ್ಯಾಸಕ್ಕೆ ಸೇರಿದ ಸ್ವತ್ತು, ಅಂಥ ಅಧಿಕೃತ ನ್ಯಾಸಧಾರಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂಥ ಲಿಖಿತದಲ್ಲಿ ತಿಳಿಯಪಡಿಸಿರುವ ನಂಬಿಕೆ ಆಧಾರದ ಮೇಲೆ ಅವನು ಧಾರಣ ಮಾಡತಕ್ಕದ್ದು.

9. **ಉಯಿಲಿನ ಮೂಲಕ ಅಧಿಕೃತ ನ್ಯಾಸಧಾರಿಯನ್ನು ನ್ಯಾಸಧಾರಿಯಾಗಿ ನೇಮಕ.**– ಅಧಿಕೃತ ನ್ಯಾಸಧಾರಿಯನ್ನು ಆ ಹೆಸರಿನಲ್ಲಿ ಅಥವಾ ಯಾವುದೇ ಇತರ ಸಾಕಷ್ಟು ವರ್ಣನೆ ಮಾಡಿ ಯಾವುದೇ ಉಯಿಲಿನ ಮೂಲಕ ನ್ಯಾಸಧಾರಿಯಾಗಿ ನೇಮಕ ಮಾಡಿದಾಗ ಉಯಿಲಿನ ಕರ್ತನ ಉಯಿಲಿನ ನಿರ್ವಾಹಕನು ಅಥವಾ ಅವನ ಎಸ್ಟೇಟಿನ ಆಡಳಿತಗಾರನು ಪ್ರೊಬೇಟ್‌ನ್ನು ಅಥವಾ ಆಡಳಿತ ಪತ್ರಗಳನ್ನು ಪಡೆದ ನಂತರ ಅಂಥ ಉಯಿಲಿನ ಒಳಾಂಶಗಳನ್ನು ನಿಯಮಿಸಿದ ರೀತಿಯಲ್ಲಿ ಅಂಥ ಅಧಿಕೃತ ನ್ಯಾಸಧಾರಿಗೆ ಹೇಳತಕ್ಕದ್ದು ಮತ್ತು ಅಧಿಕೃತ ನ್ಯಾಸಧಾರಿಯು ನ್ಯಾಸವನ್ನು ಒಪ್ಪಿಕೊಳ್ಳಲು ಸಮ್ಮತಿಸಿದರೆ ಆಗ ನ್ಯಾಸಕ್ಕೆ ಸೇರಿದ ಸ್ವತ್ತನ್ನು ಅಧಿಕೃತ ನ್ಯಾಸಧಾರಿಗೆ ವರ್ಗಾಯಿಸಿರುವ ಲಿಖಿತಪತ್ರವನ್ನು ಅಂಥ ಕಾರ್ಯನಿರ್ವಾಹಕನು ಅಥವಾ ಆಡಳಿತಗಾರನು ಬರೆದುಕೊಟ್ಟ ನಂತರ ಅಂಥ ಸ್ವತ್ತು ಅಂಥ ಅಧಿಕೃತ ನ್ಯಾಸಧಾರಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಸದರಿ ಉಯಿಲಿನಲ್ಲಿ ವ್ಯಕ್ತಪಡಿಸಿರುವ ನಂಬಿಕೆಯ ಆಧಾರದ ಮೇಲೆ ಅವನು ಆ ಸ್ವತ್ತನ್ನು ಧಾರಣ ಮಾಡತಕ್ಕದ್ದು:

ಪರಂತು, ಅಧಿಕೃತ ನ್ಯಾಸಧಾರಿಯ ಸಮ್ಮತಿಯನ್ನು ಸದರಿ ಲಿಖಿತಪತ್ರದಲ್ಲಿ ತಿಳಿಸಿರತಕ್ಕದ್ದು ಮತ್ತು ಅಂಥ ಲಿಖಿತಪತ್ರವನ್ನು ಅಧಿಕೃತ ನ್ಯಾಸಧಾರಿಯು ವಿಧ್ಯುಕ್ತವಾಗಿ ಜಾರಿ ಮಾಡತಕ್ಕದ್ದು.

**10. ಅಧಿಕೃತ ನ್ಯಾಸಧಾರಿಯನ್ನು ಸ್ವತ್ತಿನ ನ್ಯಾಸಧಾರಿಯಾಗಿ ನೇಮಕ ಮಾಡಲು ಉಚ್ಚ ನ್ಯಾಯಾಲಯದ ಅಧಿಕಾರ.**– (1) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವ ನ್ಯಾಸವನ್ನು ಒಪ್ಪಿಕೊಳ್ಳಲು ಅಧಿಕೃತ ನ್ಯಾಸಧಾರಿಯನ್ನು ಪ್ರತಿಬಂಧಿಸಲಾಗಿದೆಯೋ ಆ ನ್ಯಾಸವನ್ನು ಹೊರತುಪಡಿಸಿ ಇತರ ನ್ಯಾಸಕ್ಕೆ ಯಾವುದೇ ಸ್ವತ್ತು ಸೇರಿದ್ದರೆ ಮತ್ತು ಉಚ್ಚ ನ್ಯಾಯಾಲಯದ ಸಾಮಾನ್ಯ ಅಥವಾ ವಿಶೇಷ ಮೂಲ ಸಿವಿಲ್ ಅಧಿಕಾರವ್ಯಾಪ್ತಿಯ ಸ್ಥಳೀಯ ಎಲ್ಲೆಗಳೊಳಗೆ, ನ್ಯಾಸದಲ್ಲಿ ಕೆಲಸ ಮಾಡಲು ಇಚ್ಚಿಸುವ ಅಥವಾ ಸಮರ್ಥನಾದ ಯಾರೇ ನ್ಯಾಸಧಾರಿಯು ಇಲ್ಲದಿದ್ದರೆ, ಉಚ್ಚ ನ್ಯಾಯಾಲಯವು ತನಗೆ ಸಲ್ಲಿಸಿದ ಅರ್ಜಿಯ ಮೇಲೆ ಅಂಥ ಸ್ವತ್ತಿನ ನ್ಯಾಸಧಾರಿಯಾಗಿ, ಅಧಿಕೃತ ನ್ಯಾಸಧಾರಿಯನ್ನು ಅವನ ಸಮ್ಮತಿಯೊಂದಿಗೆ ಆ ಹೆಸರಿನಲ್ಲಿ ನೇಮಕ ಮಾಡಲು ಆದೇಶ ಮಾಡಬಹುದು.

(2) ಅಂಥ ಆದೇಶವನ್ನು ಮಾಡಿದ ನಂತರ ಆ ಸ್ವತ್ತು ಅಧಿಕೃತ ನ್ಯಾಸಧಾರಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂಥ ಆದೇಶಕ್ಕೆ ಮೊದಲು ಆ ಸ್ವತ್ತನ್ನು ಈ ಹಿಂದೆ ಧಾರಣ ಮಾಡಿದ್ದಂತೆಯೇ ಅವನು ನಂಬಿಕೆಯ ಆಧಾರದ ಮೇಲೆ ಧಾರಣ ಮಾಡತಕ್ಕದ್ದು ಮತ್ತು ಹಿಂದಿನ ನ್ಯಾಸಧಾರಿಗೆ ಅಥವಾ ನ್ಯಾಸಧಾರಿಗಳಿಗೆ (ಯಾರಾದರೂ ಇದ್ದಲ್ಲಿ) ಅಂಥ ಆದೇಶದ ದಿನಾಂಕಕ್ಕೆ ಮೊದಲು ಮಾಡಿರುವ ಕಾರ್ಯಗಳ ಸಂಬಂಧದಲ್ಲಿ, ಹೊರತು ಅಂಥ ಸ್ವತ್ತಿನ ನ್ಯಾಸಧಾರಿಗಳಾಗಿ ಅವರಿಗಿರುವ ಎಲ್ಲ ಹೊಣೆಗಾರಿಕೆಯಿಂದ ವಿನಾಯಿತಿ ನೀಡತಕ್ಕದ್ದು.

(3) ಈ ಪ್ರಕರಣದಲ್ಲಿ ಇರುವುದು ಯಾವುದು, ಭಾರತ ನ್ಯಾಸ ಅಧಿನಿಯಮ 1882 (1882ರ 2) ರ ಉಪಬಂಧಗಳಿಗೆ ಬಾಧಕವುಂಟು ಮಾಡುತ್ತದೆ ಎಂದು ಭಾವಿಸತಕ್ಕದ್ದಲ್ಲ.

11. **ಅಧಿಕೃತ ನ್ಯಾಸಧಾರಿಯನ್ನು ಸ್ವತ್ತಿನ ನ್ಯಾಸಧಾರಿಯನ್ನಾಗಿ ನೇಮಕಮಾಡಲು ಖಾಸಗಿ ನ್ಯಾಸಧಾರಿಗಳಿಗಿರುವ ಅಧಿಕಾರ.**– (1) ಯಾವುದೇ ಸ್ವತ್ತು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವ ನ್ಯಾಸವನ್ನು ಒಪ್ಪಿಕೊಳ್ಳಲು ಅಧಿಕೃತ ನ್ಯಾಸಧಾರಿಯನ್ನು ಪ್ರತಿಬಂಧಿಸಲಾಗಿದೆಯೋ ಆ ನ್ಯಾಸಕ್ಕಿಂತ ಭಿನ್ನವಾದ ನ್ಯಾಸಕ್ಕೆ ಸೇರಿದ್ದರೆ ಹಾಗೂ ಎಲ್ಲಾ ನ್ಯಾಸಧಾರಿಗಳು ಅಥವಾ ಬದುಕಿರುವ ಅಥವಾ ಮುಂದುವರೆಯುತ್ತಿರುವ ನ್ಯಾಸಧಾರಿಯು ಅಥವಾ ನ್ಯಾಸಧಾರಿಗಳು ಮತ್ತು ನ್ಯಾಸದಲ್ಲಿ ಫಲಾನುಭವದ ಹಿತಾಸಕ್ತಿಯುಳ್ಳ ಎಲ್ಲ ವ್ಯಕ್ತಿಗಳು, ಅಂಥ ನ್ಯಾಸಧಾರಿಯ ಅಥವಾ ನ್ಯಾಸಧಾರಿಗಳ ಸ್ಥಾನದಲ್ಲಿ ಅಧಿಕೃತ ನ್ಯಾಸಧಾರಿಯನ್ನು ನೇಮಕಮಾಡಬೇಕೆಂದು ಅಪೇಕ್ಷಿಪಟ್ಟಲ್ಲಿ ಅಂಥ ನ್ಯಾಸಧಾರಿಯು ಅಥವಾ ನ್ಯಾಸಧಾರಿಗಳು ಅಧಿಕೃತ ನ್ಯಾಸಧಾರಿಯನ್ನು ಲಿಖಿತಪತ್ರದ ಮೂಲಕ ಅಂಥ ಸ್ವತ್ತಿನ ನ್ಯಾಸಧಾರಿಯಾಗಿ ಆತನ ಸಮ್ಮತಿಪಡೆದು ಆ ಹೆಸರಿನಿಂದ ಅಥವಾ ಯಾವುದೇ ಇತರ ಸಾಕಷ್ಟು ವಿವರಣೆ ನೀಡಿ ನೇಮಕ ಮಾಡುವುದು ಕಾನೂನುಬದ್ಧವಾಗಿರತಕ್ಕದ್ದು:

ಪರಂತು, ಅಧಿಕೃತ ನ್ಯಾಸಧಾರಿಯ ಸಮ್ಮತಿಯನ್ನು ಸದರಿ ಲಿಖಿತದಲ್ಲಿ ಹೇಳಿರತಕ್ಕದ್ದು ಮತ್ತು ಅಂಥ ಲಿಖಿತವನ್ನು ಅಧಿಕೃತ ನ್ಯಾಸಧಾರಿಯು ವಿಧ್ಯುಕ್ತವಾಗಿ ಜಾರಿಗೊಳಿಸತಕ್ಕದ್ದು.

(2) ಹಾಗೆ ನೇಮಕ ಮಾಡಿದ ನಂತರ ಅಂಥ ಸ್ವತ್ತು ಅಧಿಕೃತ ನ್ಯಾಸಧಾರಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂಥ ನೇಮಕಕ್ಕೆ ಮೊದಲು ಆ ಸ್ವತ್ತನ್ನು ಈ ಹಿಂದೆ ಅವನು ಧಾರಣ ಮಾಡಿದ್ದಂತೆಯೇ ನಂಬಿಕೆಯ ಆಧಾರದ ಮೇಲೆ ಧಾರಣ ಮಾಡತಕ್ಕದ್ದು ಮತ್ತು ಹಿಂದಿನ ನ್ಯಾಸಧಾರಿಗೆ ಅಥವಾ ನ್ಯಾಸಧಾರಿಗಳಿಗೆ, ಅಂಥ ನೇಮಕದ ದಿನಾಂಕಕ್ಕೆ ಮೊದಲು ಮಾಡಿರುವ ಕಾರ್ಯಗಳ ಸಂಬಂಧದಲ್ಲಿ ಹೊರತು ಅಂಥ ಸ್ವತ್ತಿನ ನ್ಯಾಸಧಾರಿಗಳಾಗಿ ಅವರಿಗಿರುವ ಎಲ್ಲ ಹೊಣೆಗಾರಿಕೆಯಿಂದ ವಿನಾಯಿತಿ ನೀಡತಕ್ಕದ್ದು.

12. **ಕಾರ್ಯನಿರ್ವಾಹಕನು ಅಥವಾ ಆಡಳಿತಗಾರನು, ಅಪ್ರಾಪ್ತ ವಯಸ್ಕನ ಅಥವಾ ಮನೋವಿಕಲನ ಮರಣಶಾಸನ ಸ್ವತ್ತು, ಪಾಲು, ಇತ್ಯಾದಿಗಳನ್ನು ಅಧಿಕೃತ ನ್ಯಾಸಧಾರಿಗೆ ವಹಿಸಿಕೊಡುವುದು.**– (1) ಯಾರೇ ಅಪ್ರಾಪ್ತ ವಯಸ್ಕನು ಅಥವಾ ಮನೋವಿಕಲನು ಯಾವುದೇ ದಾನಕ್ಕೆ, ಮರಣಶಾಸನ ಸ್ವತ್ತಿಗೆ ಅಥವಾ ಮೃತ ವ್ಯಕ್ತಿಯ ಆಸ್ತಿಗಳ ಪಾಲಿಗೆ ಹಕ್ಕುಳ್ಳವನಾಗಿದ್ದು, ಅಂಥ ದಾನವನ್ನು ಯಾವ ವ್ಯಕ್ತಿಯು ನೀಡಿರುವನೋ ಆ ವ್ಯಕ್ತಿಯು ಅಥವಾ ಅಂಥ ಮರಣ ಶಾಸನ ಸ್ವತ್ತನ್ನು ಅಥವಾ ಪಾಲನ್ನು ಯಾವ ಕಾರ್ಯನಿರ್ವಾಹಕನು ಅಥವಾ ಆಡಳಿತಗಾರನು ವಹಿಸಿಕೊಡಬಹುದೋ ಅಥವಾ ವರ್ಗಾವಣೆ ಮಾಡಬಹುದೋ ಆ ಕಾರ್ಯನಿರ್ವಾಹಕನು ಅಥವಾ

ಆಡಳಿತಗಾರನು ಅಥವಾ ಅಂತಹ ದಾನವನ್ನು, ಮರಣ ಶಾಸನ ಸ್ವತ್ತನ್ನು ಅಥವಾ ಪಾಲನ್ನು ನೀಡುವ ಯಾರೇ ನ್ಯಾಸಧಾರಿಯು ಅದನ್ನು ಅಧಿಕೃತ ನ್ಯಾಸಧಾರಿಗೆ ಅವನ ಸಮ್ಮತಿ ಪಡೆದು ಆ ಹೆಸರಿನಲ್ಲಿ ಅಥವಾ ಯಾವುದೇ ಇತರ ಸಾಕಷ್ಟು ವಿವರಣೆ ನೀಡಿ, ಲಿಖಿತಪತ್ರದ ಮೂಲಕ ವರ್ಗಾಯಿಸುವುದು ಕಾನೂನು ಸಮ್ಮತವಾದುದಾಗಿರತಕ್ಕದ್ದು:

ಪರಂತು, ಅಧಿಕೃತ ನ್ಯಾಸಧಾರಿಯ ಸಮ್ಮತಿಯನ್ನು ಸದರಿ ಲಿಖಿತಪತ್ರದಲ್ಲಿ ಹೇಳಿರತಕ್ಕದ್ದು ಮತ್ತು ಆ ಲಿಖಿತಪತ್ರವನ್ನು ಅಧಿಕೃತ ನ್ಯಾಸಧಾರಿಯು ವಿದ್ಯುಕ್ತವಾಗಿ ಜಾರಿಮಾಡತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಅಧಿಕೃತ ನ್ಯಾಸಧಾರಿಗೆ ವರ್ಗಾಯಿಸಿದ ಯಾವುದೇ ಹಣ ಅಥವಾ ಸ್ವತ್ತು ಅವನಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂಥ ಅಧಿಕೃತ ನ್ಯಾಸಧಾರಿಯಲ್ಲಿ ನಿಹಿತವಾಗಿರುವ ಇತರ ಸ್ವತ್ತಿಗೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿ ಇರುವ ಅವೇ ಉಪಬಂಧಗಳಿಗೆ ಆ ಹಣ ಅಥವಾ ಆ ಸ್ವತ್ತು ಒಳಪಟ್ಟಿರತಕ್ಕದ್ದು.

13. **ಬಾಂಡ್ ಅಥವಾ ಭದ್ರತೆ ನೀಡುವಂತೆ ಅಗತ್ಯಪಡಿಸುವಂತಿಲ್ಲ.–** (1) ಯಾರೇ ಅಧಿಕೃತ ನ್ಯಾಸಧಾರಿಯು ಈ ಅಧಿನಿಯಮದ ಮೇರೆಗೆ ಯಾವುದೇ ಅಧಿಕಾರ ಸ್ಥಾನದಲ್ಲಿ ನೇಮಕಗೊಂಡಾಗ ಯಾವುದೇ ಬಾಂಡನ್ನು ಬರೆದು ಕೊಡುವಂತೆ ಅಥವಾ ಭದ್ರತೆ ನೀಡುವಂತೆ ಅವನನ್ನು ಯಾವುದೇ ನ್ಯಾಯಾಲಯವು ಅಗತ್ಯಪಡಿಸತಕ್ಕದ್ದಲ್ಲ.

(2) ಯಾರೇ ಅಧಿಕೃತ ನ್ಯಾಸಧಾರಿಯನ್ನು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅವನು ಸಲ್ಲಿಸಿದ ಯಾವುದೇ ಅರ್ಜಿಯನ್ನು ಅವನ ಸಹಿಯ ಹೊರತು ಅನ್ಯಥಾ ಪರಿಶೀಲಿಸುವಂತೆ ಅಗತ್ಯಪಡಿಸತಕ್ಕದ್ದಲ್ಲ ಮತ್ತು ಯಾವುದೇ ಅಂಥ ಅರ್ಜಿಯಲ್ಲಿ ಹೇಳಿರುವ ಸಂಗತಿಗಳು ಅವನ ವೈಯಕ್ತಿಕ ತಿಳುವಳಿಕೆಗೆ ಬಾರದಿದ್ದರೆ, ಅರ್ಜಿಯನ್ನು ಪರಿಶೀಲಿಸಲು ಸಕ್ಷಮನಾದ ಯಾರೇ ವ್ಯಕ್ತಿಯು ಅದನ್ನು ಪರಿಶೀಲಿಸಿ ತನ್ನ ಸಹಿ ಹಾಕಬಹುದು.

14. **ಅಧಿಕೃತ ನ್ಯಾಸಧಾರಿಯ ನಮೂದು ನ್ಯಾಸದ ಸೂಚನೆಯಾಗಲಾರದು.–** ಅಧಿಕೃತ ನ್ಯಾಸಧಾರಿಯು ಆ ಹೆಸರಿನಿಂದ ಕಂಪನಿಯ ಪುಸ್ತಕಗಳಲ್ಲಿ ಮಾಡಿದ ನಮೂದನ್ನು ನ್ಯಾಸದ ಸೂಚನೆ ಎಂದು ಭಾವಿಸತಕ್ಕದ್ದಲ್ಲ ಮತ್ತು ಅಧಿಕೃತ ನ್ಯಾಸಧಾರಿಯು ನಿಗಮವಾಗಿರುವ ಕಾರಣ ಮಾತ್ರದಿಂದಲೇ ಕಂಪನಿಯು ತನ್ನ ರಿಜಿಸ್ಟರಿನಲ್ಲಿ ಅಧಿಕೃತ ನ್ಯಾಸಧಾರಿಯ ಹೆಸರನ್ನು ನಮೂದಿಸುವುದನ್ನು ಆಕ್ಷೇಪಿಸಲು ಹಕ್ಕುಳ್ಳದಾಗಿರತಕ್ಕದ್ದಲ್ಲ ಮತ್ತು ಸ್ವತ್ತಿನ ಬಗ್ಗೆ ವ್ಯವಹರಿಸುವಾಗ, ವ್ಯವಹರಿಸಿರುವ ವ್ಯಕ್ತಿ ಅಧಿಕೃತ ನ್ಯಾಸಧಾರಿಯಾಗಿದ್ದನೆಂಬ ಸಂಗತಿಯು ಸ್ವತಃ ನ್ಯಾಸದ ಸೂಚನೆ ಆಗತಕ್ಕದ್ದಲ್ಲ.

15. **ಸರ್ಕಾರದ ಹೊಣೆಗಾರಿಕೆ.–** (1) ಅಧಿಕೃತ ನ್ಯಾಸಧಾರಿಯು, ಅವನು ಖಾಸಗಿ ನ್ಯಾಸಧಾರಿಯಾಗಿದ್ದರೆ ಅವನಾಗಲಿ ಅಥವಾ ಅವನ ಅಧಿಕಾರಿಗಳಲ್ಲಿ ಯಾರೇ ಆಗಲಿ ಯಾವುದೇ ರೀತಿಯಲ್ಲೂ ಸಹಭಾಗಿಯಾಗಿಲ್ಲವೋ ಅಥವಾ ಅವನಾಗಲಿ ಅಥವಾ ಅವನ ಆ ಯಾರೇ ಅಧಿಕಾರಿಗಳಾಗಲಿ ಯುಕ್ತಾಯುಕ್ತ ಎಚ್ಚರಿಕೆ ವಹಿಸಿ ಆ ಹೊಣೆಗಾರಿಕೆಯ ಭಾರ ಬೀಳುವುದನ್ನು ತಪ್ಪಿಸಿಲ್ಲವೋ ಅಂಥ ಹೊಣೆಗಾರಿಕೆಯ ಹೊರತು, ಆ ಹೊಣೆಗಾರಿಕೆಯನ್ನು ಸ್ವತಃ ತಾನೇ ತೀರಿಸಲು ಬದ್ಧನಾಗಿರುವನೋ ಅಂಥ ಹೊಣೆಗಾರಿಕೆಯನ್ನು ತೀರಿಸಲು ಅಗತ್ಯವಾದ ಎಲ್ಲಾ ಹಣವನ್ನು ತುಂಬಿ ಕೊಡಲು ಸರ್ಕಾರವು ಬದ್ಧವಾಗಿರತಕ್ಕದ್ದು ಮತ್ತು ಮೇಲೆ ಹೇಳಿದ ಅಂಥ ಎರಡು ಸಂದರ್ಭಗಳಲ್ಲಿ ಅಧಿಕೃತ ನ್ಯಾಸಧಾರಿಯಾಗಲಿ ಅಥವಾ ಸರ್ಕಾರವಾಗಲಿ ಯಾವುದೇ ಹೊಣೆಗಾರಿಕೆಗೆ ಒಳಪಡತಕ್ಕದ್ದಲ್ಲ.

(2) ಉಪ ಪ್ರಕರಣ (1)ರಲ್ಲಿ ಇರುವುದು ಯಾವುದು ಸರ್ಕಾರವನ್ನು ಅಥವಾ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಯಾರೇ ಅಧಿಕೃತ ನ್ಯಾಸಧಾರಿಯನ್ನು, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಯಾರೇ ಅಧಿಕೃತ ನ್ಯಾಸಧಾರಿಯು ಮಾಡಿದ ಅಥವಾ ಅವನ ಅಧಿಕಾರದ ಮೇರೆಗೆ ಮಾಡಿದ ಯಾವುದೇ ಕಾರ್ಯಕ್ಕೆ ಹೊಣೆಯಾಗಿಸುತ್ತದೆಂದು ಭಾವಿಸತಕ್ಕದ್ದಲ್ಲ.

16. **ಕೆಲವು ಪ್ರಕರಣಗಳಲ್ಲಿ ದಾವೆಯ ನೋಟೀಸ್ ಅಗತ್ಯವಿರುವುದಿಲ್ಲ.–** ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) 80ನೇ ಪ್ರಕರಣದಲ್ಲಿ ಇರುವುದು ಯಾವುದು, ಯಾವ ದಾವೆಯಲ್ಲಿ ಅಧಿಕೃತ ನ್ಯಾಸಧಾರಿಯ ವಿರುದ್ಧ ವೈಯಕ್ತಿಕವಾಗಿ ಪರಿಹಾರವನ್ನು ಕ್ಲೇಮು ಮಾಡಿಲ್ಲವೋ ಆ ಯಾವುದೇ ದಾವೆಯಲ್ಲಿ ಅನ್ವಯವಾಗತಕ್ಕದ್ದಲ್ಲ.

## ಭಾಗ –IV

## ಫೀಜುಗಳು

17. **ಫೀಜುಗಳು.–** (1) ಅಧಿಕೃತ ನ್ಯಾಸಧಾರಿಯ ಕರ್ತವ್ಯಗಳ ಸಂಬಂಧದಲ್ಲಿ ಶೇಕಡಾ ಪ್ರಮಾಣದ ರೂಪದಲ್ಲಿ ಅಥವಾ ಸರ್ಕಾರವು ಅನ್ಯಥಾ ನಿಯಮಿಸಬಹುದಾದಂತೆ ಫೀಜುಗಳನ್ನು ವಿಧಿಸತಕ್ಕದ್ದು.

(2) ಈ ಪ್ರಕರಣದ ಮೇರೆಗಿನ ಫೀಜುಗಳು ವಿವಿಧ ಸ್ವತ್ತುಗಳಿಗೆ ಅಥವಾ ಸ್ವತ್ತುಗಳ ವರ್ಗಗಳಿಗೆ ಅಥವಾ ವಿವಿಧ ಕರ್ತವ್ಯಗಳಿಗೆ ತಕ್ಕಂತೆ ವಿವಿಧ ದರಗಳಲ್ಲಿ ಇರಬಹುದಾಗಿದೆ ಮತ್ತು ಅವುಗಳನ್ನು ಸಂಬಳಗಳ ನೀಡಿಕೆಗೆ ಮತ್ತು ಈ ಅಧಿನಿಯಮದ ಕಾರ್ಯನಿರ್ವಹಣೆಗೆ ಆನುಷಂಗಿಕವಾದ ಎಲ್ಲಾ ಇತರ ವೆಚ್ಚಗಳನ್ನು ಮಾಡಲು (ಈ ಅಧಿನಿಯಮದ ಮೇರೆಗೆ ಉಂಟಾಗುವ ನಷ್ಟಕ್ಕೆ ಸರ್ಕಾರ ವಿಮೆ ಮಾಡಬೇಕಾದ್ದರಿಂದ ಸರ್ಕಾರವು ನಿರ್ಧರಿಸಬಹುದಾದಂತಹ ಮೊಬಲಗನ್ನು ಒಳಗೊಂಡು) ಸಾಕಾಗುವಷ್ಟು ಮೊಬಲಗು ಒದಗಿಬರುವಂತೆ ವ್ಯವಸ್ಥೆ ಮಾಡತಕ್ಕದ್ದು.

18. **ಫೀಜುಗಳ ವಿಲೆ.–** (1) ಭರಿಸುವ ಸಲುವಾಗಿ ಇಟ್ಟುಕೊಳ್ಳಬೇಕಾದ ಅಥವಾ ನ್ಯಾಸದ ನಿಧಿಯಿಂದ ಸಂದಾಯ ಮಾಡಬೇಕಾದ ಎಲ್ಲಾ ವೆಚ್ಚಗಳ ಹಣವನ್ನು, ಅಧಿಕೃತ ನ್ಯಾಸಧಾರಿಯು ಖಾಸಗಿ ನ್ಯಾಸಧಾರಿಯಾಗಿದ್ದಿದ್ದರೆ ಹೇಗೆ ಇಟ್ಟುಕೊಂಡಿರುತ್ತಿದ್ದನೋ ಅಥವಾ ಸಂದಾಯ ಮಾಡುತ್ತಿದ್ದನೋ ಹಾಗೆಯೇ ಇಟ್ಟುಕೊಂಡಿರತಕ್ಕದ್ದು ಅಥವಾ ಸಂದಾಯ

ಮಾಡತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಯಾವುದೇ ಫೀಜುಗಳನ್ನು ಅಂತಹ ವೆಚ್ಚಗಳಾಗಿ ಅಥವಾ ಅವುಗಳಿಗೆ ಹೆಚ್ಚಿಗೆಯಾಗಿ ಭರಿಸಲು ಇಟ್ಟುಕೊಂಡಿರತಕ್ಕದ್ದು ಅಥವಾ ಸಂದಾಯ ಮಾಡತಕ್ಕದ್ದು.

(2) ಅಧಿಕೃತ ನ್ಯಾಸಧಾರಿಯು ಈ ಅಧಿನಿಯಮದ ಮೇರೆಗೆ ಅವನು ಸ್ವೀಕರಿಸುವ ಎಲ್ಲಾ ಫೀಜುಗಳನ್ನು ಸರ್ಕಾರವು ನಿಯಮಿಸಬಹುದಾದಂತಹ ಪ್ರಾಧಿಕಾರಕ್ಕೆ ಮತ್ತು ನಿಯಮಿಸಬಹುದಾದಂತಹ ರೀತಿಯಲ್ಲಿ ಮತ್ತು ಅಂತಹ ಕಾಲಗಳಲ್ಲಿ ವರ್ಗಾವಣೆ ಮಾಡತಕ್ಕದ್ದು ಮತ್ತು ಸಂದಾಯ ಮಾಡತಕ್ಕದ್ದು ಮತ್ತು ಅದನ್ನು ಸರ್ಕಾರದ ಲೆಕ್ಕಕ್ಕೆ ತೆಗೆದುಕೊಂಡು ಖಾತೆಗೆ ಜಮೆ ಮಾಡತಕ್ಕದ್ದು.

## ಭಾಗ – V
## ಲೆಕ್ಕ ಪರಿಶೋಧನೆ

19. **ಅಧಿಕೃತ ನ್ಯಾಸಧಾರಿಯ ಲೆಕ್ಕಪತ್ರಗಳು, ಇತ್ಯಾದಿಗಳನ್ನು ಪರಿಶೀಲಿಸಲು ಮತ್ತು ಸರ್ಕಾರಕ್ಕೆ ವರದಿ ಮಾಡಲು ಲೆಕ್ಕ ಪರಿಶೋಧಕರ ನೇಮಕ.–** (1) ಅಧಿಕೃತ ನ್ಯಾಸಧಾರಿಯ ಲೆಕ್ಕಪತ್ರಗಳನ್ನು ಕನಿಷ್ಠ ಪಕ್ಷ ವರ್ಷಕ್ಕೊಮ್ಮೆ ಮತ್ತು ಇತರ ಯಾವ ಕಾಲದಲ್ಲಿ ಗೊತ್ತುಪಡಿಸಿದ ವ್ಯಕ್ತಿಯಿಂದ ಮತ್ತು ನಿಯಮಿಸಿದ ರೀತಿಯಲ್ಲಿ ಲೆಕ್ಕ ಪರಿಶೋಧನೆ ಆಗಬೇಕೆಂದು ಸರ್ಕಾರವು ನಿರ್ದೇಶಿಸುತ್ತದೋ ಆ ಕಾಲದಲ್ಲಿ ಆ ವ್ಯಕ್ತಿಯು ಆ ರೀತಿಯಲ್ಲಿ ಲೆಕ್ಕ ಪರಿಶೋಧನೆ ಮಾಡತಕ್ಕದ್ದು.

(2) ಲೆಕ್ಕ ಪರಿಶೋಧಕರು ಅಂಥ ಲೆಕ್ಕಪತ್ರಗಳನ್ನು ಪರಿಶೀಲಿಸತಕ್ಕದ್ದು ಮತ್ತು ಅದರ ಮೇಲಿನ ವರದಿಯನ್ನು, ಮತ್ತು ,–

ಎ) ಲೆಕ್ಕಪತ್ರಗಳನ್ನು ನಿಯಮಿಸಿದ ರೀತಿಯಲ್ಲಿ ಪರಿಶೋಧನೆ ಮಾಡಲಾಗಿದೆ ಎಂಬುದನ್ನು ಮತ್ತು ಅಂಥ ಲೆಕ್ಕಪರಿಶೋಧನೆಯಿಂದ, ಲೆಕ್ಕಪತ್ರಗಳಲ್ಲಿ ಯಾವುದೆಲ್ಲವು ಸಂಪೂರ್ಣವಾಗಿ ಮತ್ತು ನಿಜವಾಗಿ ನಿರೂಪಣೆಗೊಂಡಿರುವುದನ್ನು ಖಚಿತಪಡಿಸಿಕೊಳ್ಳಬೇಕೋ ಆ ಎಲ್ಲವು ಸಾಧ್ಯವಾದಷ್ಟು ಮಟ್ಟಿಗೆ ಸಂಪೂರ್ಣವಾಗಿ ಮತ್ತು ನಿಜವಾಗಿ ಒಳಗೊಂಡಿದೆ ಎಂಬುದನ್ನು;

ಬಿ) ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಮೇರೆಗೆ ಯಾವ ಪುಸ್ತಕಗಳನ್ನು ಅಧಿಕೃತ ನ್ಯಾಸಧಾರಿಯು ವಿಧ್ಯುಕ್ತವಾಗಿ ಮತ್ತು ನಿಯತವಾಗಿ ಇಡಬೇಕೆಂದು ನಿರ್ದೇಶನ ನೀಡಲಾಗುತ್ತದೋ ಅಂಥ ಪುಸ್ತಕಗಳನ್ನು ಹಾಗೆ ಇಡಲಾಗಿದೆ ಎಂಬುದನ್ನು;

ಸಿ) ನ್ಯಾಸದ ನಿಧಿಗಳನ್ನು ಮತ್ತು ಭದ್ರತಾ ಪತ್ರಗಳನ್ನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಮೂಲಕ ನಿಯಮಿಸಿದ ರೀತಿಯಲ್ಲಿ ವಿಧ್ಯುಕ್ತವಾಗಿ ಇಡಲಾಗಿದೆ ಮತ್ತು ಹೂಡಿಕೆ ಮಾಡಲಾಗಿದೆ ಮತ್ತು ಠೇವಣಿ ಇಡಲಾಗಿದೆ ಎಂಬುದನ್ನು

– ತೋರಿಸುವ,

ಅಥವಾ (ಸಂದರ್ಭಾನುಸಾರ) ಅಂತಹ ಲೆಕ್ಕಪತ್ರಗಳು ನ್ಯೂನತೆಯಿಂದ ಕೂಡಿವೆ ಎಂಬುದನ್ನು ಅಥವಾ ಅಂಥ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಬಹುದಾದಂತವುಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮವನ್ನು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಪಾಲಿಸಲು ಅಧಿಕೃತ ನ್ಯಾಸಧಾರಿಯು ವಿಫಲನಾಗಿದ್ದಾನೆ ಎಂಬುದನ್ನು ತೋರಿಸುವ, ಅವನು ಸಹಿ ಮಾಡಿದ, ಪ್ರಮಾಣಪತ್ರದೊಂದಿಗೆ ನಿಯಮಿಸಿದ ನಮೂನೆಯಲ್ಲಿ, ಸರ್ಕಾರಕ್ಕೆ ಕಳುಹಿಸತಕ್ಕದ್ದು.

20. **ಸಾಕ್ಷಿದಾರರನ್ನು ಸಮನು ಮಾಡಲು ಮತ್ತು ದಸ್ತಾವೇಜುಗಳನ್ನು ತರಿಸಿಕೊಳ್ಳಲು ಲೆಕ್ಕಪರಿಶೋಧಕನ ಅಧಿಕಾರ.–** (1) ಪ್ರತಿಯೊಬ್ಬ ಲೆಕ್ಕ ಪರಿಶೋಧಕನು,–

(ಎ) ಯಾರ ಹಾಜರಾತಿಯು ಕಾಲಕಾಲಕ್ಕೆ ಅವಶ್ಯವೆಂದು ಅವನಿಗೆ ಕಂಡುಬರುವುದೋ ಆ ಯಾರೇ ವ್ಯಕ್ತಿಯನ್ನು ಸಮನು ಮಾಡುವುದಕ್ಕೆ; ಮತ್ತು

(ಬಿ) ಪ್ರಮಾಣ ಮಾಡಿಸಿ ಆ ಯಾರೇ ವ್ಯಕ್ತಿಯನ್ನು ವಿಚಾರಣೆ ಮಾಡುವುದಕ್ಕೆ; ಮತ್ತು

(ಸಿ) ಯಾರೇ ವ್ಯಕ್ತಿಯನ್ನು, ಪ್ರಶ್ನೆಗಳನ್ನು ಹಾಕಿ ಅಥವಾ ಅನ್ಯಥಾ ರೀತಿಯಲ್ಲಿ ವಿಚಾರಣೆ ಮಾಡಲು ಕಾರ್ಯಾಜ್ಞೆಯನ್ನು ಹೊರಡಿಸುವುದಕ್ಕೆ: ಮತ್ತು

(ಡಿ) ಯಾವ ದಸ್ತಾವೇಜನ್ನು ಅಥವಾ ವಸ್ತುವನ್ನು ಹಾಜರುಪಡಿಸುವುದು ಅಂತಹ ಲೆಕ್ಕಪರಿಶೋಧನೆಯ ಅಥವಾ ವಿಚಾರಣೆಯ ಉದ್ದೇಶಗಳಿಗಾಗಿ ಅವಶ್ಯಕವೆಂದು ಕಂಡು ಬರುವುದೋ ಆ ಯಾವುದೇ ದಸ್ತಾವೇಜನ್ನು ಅಥವಾ ವಸ್ತುವನ್ನು ಹಾಜರುಪಡಿಸಲು, ಯಾರೇ ವ್ಯಕ್ತಿಯನ್ನು ಸಮನು ಮಾಡುವುದಕ್ಕೆ

– ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) ಮೇರೆಗಿನ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಯಾರೇ ವ್ಯಕ್ತಿಯು, ಅವನನ್ನು ಸಮನು ಮಾಡಿದಾಗ ಅವನು ಹಾಜರಾಗಲು ನಿರಾಕರಿಸಿದರೆ ಅಥವಾ ಸಮಂಜಸ ಕಾರಣವಿಲ್ಲದೆ ಹಾಜರಾಗಲು ಅಥವಾ ಯಾವುದೇ ದಸ್ತಾವೇಜನ್ನು ಅಥವಾ ವಸ್ತುವನ್ನು ಹಾಜರುಪಡಿಸಲು ನಿರಾಕರಿಸಿದರೆ ಅಥವಾ ಹಾಜರಾದರೂ ಪ್ರಮಾಣ ಮಾಡಲು ಅಥವಾ ವಿಚಾರಣೆಗೆ ಒಳಪಡಲು ನಿರಾಕರಿಸಿದರೆ ಅವನು ಭಾರತ ದಂಡ ಸಂಹಿತೆಯ (1860ರ 45) 188ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಬರುವ ಮತ್ತು ಅದರ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡಿದ್ದಾನೆಂದು ಭಾವಿಸತಕ್ಕದ್ದು ಮತ್ತು ಲೆಕ್ಕಪರಿಶೋಧಕನು ಅಂಥ ನಿರಾಕರಣೆಯ ಅಥವಾ ನಿರ್ಲಕ್ಷ್ಯದ ಪ್ರತಿಯೊಂದು ಪ್ರಕರಣವನ್ನು ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

**21. ಲೆಕ್ಕಪರಿಶೋಧನಾ ವೆಚ್ಚ, ಇತ್ಯಾದಿಗಳ ಸಂದಾಯ.–** ಅಂಥ ಪ್ರತಿಯೊಂದು ಲೆಕ್ಕಪರಿಶೋಧನೆಗೆ ಮತ್ತು ಪರಿಶೀಲನೆಗೆ ಆಗುವ ಮತ್ತು ಅದಕ್ಕೆ ಪ್ರಾಸಂಗಿಕವಾದ ವೆಚ್ಚವನ್ನು ಸರ್ಕಾರವು ರಚಿಸಿದ ನಿಯಮಗಳಿಗೆ ಅನುಸಾರವಾಗಿ ನಿರ್ಧರಿಸತಕ್ಕದ್ದು ಮತ್ತು ನಿಯಮಿಸಲಾದ ರೀತಿಯಲ್ಲಿ ಅದನ್ನು ಭರಿಸತಕ್ಕದ್ದು.

**22. ಲೆಕ್ಕಪತ್ರಗಳ ಪರಿಶೀಲನೆಗೆ ಮತ್ತು ಅವುಗಳ ಪ್ರತಿಗಳನ್ನು ಪಡೆಯಲು ಫಲಾನುಭವಿಯ ಹಕ್ಕು.–** ಅಧಿಕೃತ ನ್ಯಾಸಧಾರಿಯು ನಿರ್ವಹಿಸುತ್ತಿರುವ ನ್ಯಾಸದ ಪ್ರತಿಯೊಬ್ಬ ಫಲಾನುಭವಿಯು ನಿಯಮಿಸಬಹುದಾದಂತಹ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಎಲ್ಲಾ ಸೂಕ್ತ ಕಾಲಗಳಲ್ಲಿ ಅಂಥ ನ್ಯಾಸದ ಲೆಕ್ಕಪತ್ರಗಳನ್ನು ಮತ್ತು ಲೆಕ್ಕಪರಿಶೋಧಕನ ವರದಿಯನ್ನು ಮತ್ತು ಪ್ರಮಾಣಪತ್ರವನ್ನು ಪರಿಶೀಲಿಸಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ನಿಯಮಿಸಲಾದ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಅವುಗಳ ಪ್ರತಿಗಳನ್ನು ಅಥವಾ ಅವುಗಳ ಉದ್ಧೃತ ಭಾಗಗಳನ್ನು ಅವನಿಗೆ ಒದಗಿಸತಕ್ಕದ್ದು ಮತ್ತು ಭಾರತ ನ್ಯಾಸ ಅಧಿನಿಯಮ, 1882 (1882ರ 2) ರಲ್ಲಿ ಇರುವುದು ಯಾವುದು ಈ ಪ್ರಕರಣದ ಉಪಬಂಧಗಳಿಗೆ ಬಾಧಕ ಉಂಟುಮಾಡತಕ್ಕದ್ದಲ್ಲ.

## ಭಾಗ –VI

## ಸಂಕೀರ್ಣ

**23. ಅಧಿಕೃತ ನ್ಯಾಸಧಾರಿಯ ಬಳಿ ಸಂಚಿತ ಹಣವನ್ನು ಸರ್ಕಾರಕ್ಕೆ ವರ್ಗಾಯಿಸುವುದು.–** (1) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಅಥವಾ ನಂತರ ನ್ಯಾಸದ ಫಲಾನುಭವಿಗೆ ಸಂದಾಯ ಮಾಡಬೇಕಾದ ಯಾವುದೇ ಹಣವು ಅದನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಯನ್ನು ಪತ್ತೆ ಮಾಡಲು ಅಧಿಕೃತ ನ್ಯಾಸಧಾರಿಗೆ ಸಾಧ್ಯವಾಗದ ಪರಿಣಾಮವಾಗಿ ಹನ್ನೆರಡು ವರ್ಷಗಳು ಅಥವಾ ಅದಕ್ಕೂ ಮೇಲ್ಪಟ್ಟ ಅವಧಿಯವರೆಗೆ ಅಧಿಕೃತ ನ್ಯಾಸಧಾರಿಯ ಬಳಿಯೇ ಉಳಿದಿದ್ದರೆ, ಅಂಥ ಹಣವನ್ನು ನಿಯಮಿಸಲಾದ ರೀತಿಯಲ್ಲಿ ಸರ್ಕಾರದ ಖಾತೆಗೆ ವರ್ಗಾವಣೆ ಮಾಡಿ ಜಮೆ ಮಾಡತಕ್ಕದ್ದು:

ಪರಂತು, ಅಂಥ ಹಣದ ಸಂಬಂಧದಲ್ಲಿ, ಯಾವುದೇ ನ್ಯಾಯಾಲಯದಲ್ಲಿ ದಾವೆ ಅಥವಾ ವ್ಯವಹರಣೆಯು ಬಾಕಿ ಇದ್ದಲ್ಲಿ ಅಂಥ ಹಣವನ್ನು ವರ್ಗಾಯಿಸತಕ್ಕದ್ದಲ್ಲ.

**24. ಹಾಗೆ ವರ್ಗಾಯಿಸಲಾದ ಹಣವನ್ನು ಮತ್ತೆ ಪಡೆಯಲು ಕ್ಲೇಮುದಾರನು ಅನುಸರಿಸಬೇಕಾದ ವಿಧಾನ.–** ಹಾಗೆ ವರ್ಗಾವಣೆ ಮಾಡಿದ ಯಾವುದೇ ಹಣಕ್ಕೆ ಯಾವುದೇ ಕ್ಲೇಮು ಮಾಡಿದಲ್ಲಿ ಮತ್ತು ಅಂಥ ಕ್ಲೇಮಿನ ಸಂಬಂಧದಲ್ಲಿ ನಿಯಮಿಸಲಾದ ಪ್ರಾಧಿಕಾರಿಗೆ ಮನವರಿಕೆಯಾಗುವಂತೆ, ರುಜುವಾತು ಪಡಿಸಿದಲ್ಲಿ, ಯಾವ ಹಣದ ಸಂಬಂಧದಲ್ಲಿ ಕ್ಲೇಮುನ್ನು ರುಜುವಾತುಪಡಿಸಲಾಗಿದೆಯೊ ಆ ಹಣವನ್ನು ಸರ್ಕಾರವು ಕ್ಲೇಮುದಾರನಿಗೆ ಸಂದಾಯ ಮಾಡತಕ್ಕದ್ದು.

(2) ಅಂತಹ ಕ್ಲೇಮನ್ನು ನಿಯಮಿಸಲಾದ ಪ್ರಾಧಿಕಾರಿಗೆ ಮನವರಿಕೆವಾಗುವಂತೆ ರುಜುವಾತು ಪಡಿಸದಿದ್ದಲ್ಲಿ ಕ್ಲೇಮುದಾರನು ಅಂತಹ ಹಣವನ್ನು ಮತ್ತೆ ಪಡೆಯುವುದಕ್ಕಾಗಿ ಯಾವುದೇ ಇತರ ವ್ಯವಹರಣೆಗಳನ್ನು ಕೈಗೊಳ್ಳಲು ತನಗಿರುವ ಹಕ್ಕಿಗೆ ಬಾಧಕವಾಗದಂತೆ ಸರ್ಕಾರದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು ಮತ್ತು ಉಚ್ಚ ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸುವಂತಹ ಸಾಕ್ಷ್ಯವನ್ನು ಪಡೆದ ನಂತರ ಅಂಥ ಹಣದ ಸಂದಾಯಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ಅರ್ಜಿಯ ಮೇಲೆ ಸೂಕ್ತವೆಂದು ತಾನು ಭಾವಿಸುವಂತಹ ಆದೇಶವನ್ನು ಮಾಡತಕ್ಕದ್ದು ಮತ್ತು ವ್ಯವಹರಣೆಗಳ ಎಲ್ಲಾ ಪಕ್ಷಕಾರರು ಅಂಥ ಆದೇಶಕ್ಕೆ ಬದ್ಧರಾಗಿರತಕ್ಕದ್ದು.

(3) ನ್ಯಾಯಾಲಯವು, ಅಂಥ ವ್ಯವಹರಣೆಗಳ ಇಡೀ ವೆಚ್ಚವನ್ನು ಅಥವಾ ಅದರ ಭಾಗವನ್ನು ಯಾರು ಸಂದಾಯ ಮಾಡಬೇಕು ಎಂಬುದರ ಬಗ್ಗೆಯೂ ನಿರ್ದೇಶನ ನೀಡಬಹುದು.

**25. ಅಧಿಕೃತ ನ್ಯಾಸಧಾರಿಯಲ್ಲಿ ನಿಹಿತವಾದ ಸ್ವತ್ತಿನ ಸಂಬಂಧದಲ್ಲಿ ಆದೇಶ ಮಾಡಲು ಉಚ್ಚ ನ್ಯಾಯಾಲಯದ ಅಧಿಕಾರ.–** ಅಧಿಕೃತ ನ್ಯಾಸಧಾರಿಯಲ್ಲಿ ನಿಹಿತವಾಗಿರುವ ಯಾವುದೇ ನ್ಯಾಸದ ಸ್ವತ್ತಿನ ಅಥವಾ ಅದರ ವರಮಾನದ ಅಥವಾ ಉತ್ಪನ್ನದ ಸಂಬಂಧದಲ್ಲಿ ಉಚ್ಚ ನ್ಯಾಯಾಲಯವು ಸೂಕ್ತವೆಂದು ತಾನು ಭಾವಿಸುವಂತಹ ಆದೇಶಗಳನ್ನು ಮಾಡಬಹುದು.

**26. ಅಧಿನಿಯಮದ ಮೇರೆಗೆ ಆದೇಶಕ್ಕಾಗಿ ಅರ್ಜಿಯನ್ನು ಯಾರು ಸಲ್ಲಿಸಬಹುದು.–** ಯಾವುದೇ ನ್ಯಾಸದ ಸ್ವತ್ತಿನಲ್ಲಿ ಫಲಾನುಭವದ ಹಿತಾಸಕ್ತಿಯನ್ನು ಹೊಂದಿರುವ ಯಾರೇ ವ್ಯಕ್ತಿಯು ಅಥವಾ ನ್ಯಾಸದ ನ್ಯಾಸಧಾರಿಯ ಅರ್ಜಿಯ ಮೇಲೆ ಈ ಅಧಿನಿಯಮದ ಮೇರೆಗೆ ಯಾವುದೇ ಆದೇಶವನ್ನು ಮಾಡಬಹುದು.

**27. ನ್ಯಾಯಾಲಯದ ಆದೇಶವು ಡಿಕ್ರಿಯ ಪರಿಣಾಮವನ್ನು ಹೊಂದಿರುವುದು.–** ಈ ಅಧಿನಿಯಮದ ಮೇರೆಗೆ ಉಚ್ಚ ನ್ಯಾಯಾಲಯವು ಮಾಡಿದ ಯಾವುದೇ ಆದೇಶವು, ಡಿಕ್ರಿಯು ಹೊಂದಿರುವಂತಹ ಪರಿಣಾಮವನ್ನೇ ಹೊಂದಿರತಕ್ಕದ್ದು.

**28. ನ್ಯಾಸದ ಆಡಳಿತಕ್ಕೆ ಸಂಬಂಧಿಸಿದ ಸಾಮಾನ್ಯ ಅಧಿಕಾರಗಳು.–** ಅಧಿಕೃತ ನ್ಯಾಸಧಾರಿಯು, ವೆಚ್ಚದ ಸಂಬಂಧದಲ್ಲಿ ಕಾನೂನುಬದ್ಧವಾಗಿ ತಾನು ಚಲಾಯಿಸಬಹುದಾದ ಯಾವುದೇ ಇತರ ಅಧಿಕಾರಗಳ ಜೊತೆಗೆ ಮತ್ತು ಅವುಗಳಿಗೆ ಕುಂದುಂಟಾಗದಂತೆ,–

ಎ) ಅವನು ನಿರ್ವಹಿಸುತ್ತಿರುವ ಯಾವುದೇ ನ್ಯಾಸಕ್ಕೆ ಸೇರಿದ ಯಾವುದೇ ಸ್ವತ್ತಿನ ಸರಿಯಾದ ರಕ್ಷಣೆಗೆ ಮತ್ತು ನಿರ್ವಹಣೆಗೆ ಅವಶ್ಯಕವಾಗಬಹುದಾದಂತಹ ಕಾರ್ಯಗಳಿಗಾಗಿ; ಮತ್ತು

ಬಿ) ಉಚ್ಚ ನ್ಯಾಯಾಲಯದ ಮಂಜೂರಾತಿ ಪಡೆದು ಧಾರ್ಮಿಕ, ಧರ್ಮಾರ್ಥ ಮತ್ತು ಇತರ ಉದ್ದೇಶಗಳಿಗಾಗಿ ಮತ್ತು ಅಂಥ ಸ್ವತ್ತಿನ ವಿಷಯದಲ್ಲಿ ಸೂಕ್ತ ಮತ್ತು ಸರಿ ಎನಿಸಬಹುದಾದಂಥ ಸುಧಾರಣೆಗಳಿಗಾಗಿ

– ಹಣವನ್ನು ವೆಚ್ಚ ಮಾಡಬಹುದು.

**29. ಅಧಿಕೃತ ನ್ಯಾಸಧಾರಿಯಿಂದ ಮೂಲ ನ್ಯಾಸಧಾರಿಗೆ ಅಥವಾ ಯಾರೇ ಇತರ ನ್ಯಾಸಧಾರಿಗೆ ನ್ಯಾಸದ ಸ್ವತ್ತಿನ ವರ್ಗಾವಣೆ.**– (1) ಈ ಅಧಿನಿಯಮದಲ್ಲಿರುವುದು ಯಾವುದೂ, ಅಧಿಕೃತ ನ್ಯಾಸಧಾರಿಯಲ್ಲಿ ನಿಹಿತವಾಗಿರುವ ಯಾವುದೇ ಸ್ವತ್ತನ್ನು,

ಎ) ಮೂಲ ನ್ಯಾಸಧಾರಿಗೆ (ಯಾರಾದರೂ ಇದ್ದರೆ); ಅಥವಾ

ಬಿ) ಕಾನೂನುಬದ್ಧವಾಗಿ ನೇಮಕಗೊಂಡ ಯಾರೇ ಇತರ ನ್ಯಾಸಧಾರಿಗೆ; ಅಥವಾ

ಸಿ) ನ್ಯಾಯಾಲಯವು ಯಾವ ವ್ಯಕ್ತಿಗೆ ವರ್ಗಾವಣೆ ಮಾಡುವಂತೆ ನಿರ್ದೇಶಿಸುತ್ತದೋ ಆ ಯಾರೇ ಇತರ ವ್ಯಕ್ತಿಗೆ ವರ್ಗಾವಣೆ ಮಾಡಲು ಅಡ್ಡಿಯುಂಟು ಮಾಡುತ್ತದೆಂದು ಭಾವಿಸತಕ್ಕದ್ದಲ್ಲ.

(2) ಹಾಗೆ ವರ್ಗಾವಣೆ ಮಾಡಿದ ಮೇಲೆ ಆ ಸ್ವತ್ತು ಅಂತಹ ನ್ಯಾಸಧಾರಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂಥ ವರ್ಗಾವಣೆಗೆ ಮೊದಲು ಅದನ್ನು ಯಾವ ನಂಬಿಕೆಗಳ ಆಧಾರದ ಮೇಲೆ ಧಾರಣ ಮಾಡಲಾಗಿತ್ತೋ ಅದೇ ನಂಬಿಕೆಗಳ ಆಧಾರದ ಮೇಲೆ ಅವನು ಧಾರಣ ಮಾಡತಕ್ಕದ್ದು ಮತ್ತು ಅಧಿಕೃತ ನ್ಯಾಸಧಾರಿಯನ್ನು, ಅಂತಹ ವರ್ಗಾವಣೆಗೆ ಮೊದಲು ಮಾಡಿದ ಕಾರ್ಯಗಳ ಸಂಬಂಧದಲ್ಲಿ ಹೊರತುಪಡಿಸಿ, ಅಂಥ ಸ್ವತ್ತಿನ ನ್ಯಾಸಧಾರಿಯಾಗಿ ಎಲ್ಲಾ ಬಾಧ್ಯತೆಗಳಿಂದ ವಿನಾಯಿತಿಗೊಳಿಸತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗಿನ ಯಾವುದೇ ವರ್ಗಾವಣೆಯ ವಿಷಯದಲ್ಲಿ ಅಧಿಕೃತ ನ್ಯಾಸಧಾರಿಯು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ವಿಧಿಸಬಹುದಾದ ಯಾವುದೇ ಫೀಜನ್ನು ಸ್ವತ್ತಿನಿಂದ ಬರುವ ವರಮಾನದಲ್ಲಿ ಉಳಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

**30. ನಿಯಮಗಳು.**– (1) ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೆ ತರುವುದಕ್ಕಾಗಿ ಮತ್ತು ಅಧಿಕೃತ ನ್ಯಾಸಧಾರಿಯು ತನ್ನ ಕರ್ತವ್ಯಗಳನ್ನು ನಿರ್ವಹಿಸುವಾಗ ಅವನ ವ್ಯವಹಾರಗಳನ್ನು ವಿನಿಯಮಿಸುವುದಕ್ಕಾಗಿ ಸರ್ಕಾರ ನಿಯಮಗಳನ್ನು ರಚಿಸತಕ್ಕದ್ದು.

(2) ನಿರ್ದಿಷ್ಟವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸತಕ್ಕದ್ದು:–

ಎ) ಅಧಿಕೃತ ನ್ಯಾಸಧಾರಿಯು ಇಡಬೇಕಾದ ಲೆಕ್ಕಪತ್ರಗಳು ಮತ್ತು ಅವುಗಳ ಲೆಕ್ಕಪರಿಶೋಧನೆ ಮತ್ತು ಪರಿಶೀಲನೆ;

ಬಿ) ಅಧಿಕೃತ ನ್ಯಾಸಧಾರಿಯ ವಶಕ್ಕೆ ಬರುವ ನಿಧಿಗಳ ಮತ್ತು ಭದ್ರತಾಪತ್ರಗಳ ಸುರಕ್ಷಿತ ಅಭಿರಕ್ಷೆ ಮತ್ತು ಠೇವಣಿ;

ಸಿ) ನ್ಯಾಸಧಾರಿಯ ವಶದಲ್ಲಿರುವ ಹಣವನ್ನು ಯಾವ ಸಂದರ್ಭಗಳಲ್ಲಿ ಜಮೆ ಮಾಡಬೇಕಾಗಿದೆಯೋ ಆ ಸಂದರ್ಭಗಳಲ್ಲಿ ಆ ಹಣವನ್ನು ಜಮೆ ಮಾಡುವುದು;

ಡಿ) ಅಧಿಕೃತ ನ್ಯಾಸಧಾರಿಯು ಸರ್ಕಾರಕ್ಕೆ ಅಥವಾ ಯಾವುದೇ ಇತರ ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ವಿವರಣಾ ಪಟ್ಟಿಗಳು, ಅನುಸೂಚಿಗಳು ಮತ್ತು ಇತರ ದಸ್ತಾವೇಜುಗಳು ಹಾಗೂ ಅಂಥ ವಿವರಣಾ ಪಟ್ಟಿಗಳ, ಅನುಸೂಚಿಗಳ ಅಥವಾ ಇತರ ದಸ್ತಾವೇಜುಗಳ ಪ್ರಕಟಣೆ;

ಇ) ಅಂಥ ವಿವರಣಾ ಪಟ್ಟಿಗಳನ್ನು, ಅನುಸೂಚಿಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಸಿದ್ಧಪಡಿಸುವುದಕ್ಕೆ ತಗುಲಿದ ವೆಚ್ಚದ ವಸೂಲಿ;

ಎಫ್) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಅದರ ಮೇರೆಗೆ ಸಂದಾಯ ಮಾಡಬೇಕಾದ ಫೀಜುಗಳು ಮತ್ತು ಹಾಗೆ ನಿಗದಿ ಮಾಡಲಾದ ಯಾವುದೇ ಫೀಜುಗಳ ಸಂಗ್ರಹಣೆ ಮತ್ತು ಲೆಕ್ಕ ಇಡುವುದು;

ಜಿ) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವುದೇ ಲೆಕ್ಕ ಪರಿಶೋಧನೆಯ ವೆಚ್ಚಗಳನ್ನು ಮತ್ತು ಅದಕ್ಕೆ ಆನುಷಂಗಿಕವಾದ ವೆಚ್ಚಗಳನ್ನು ಯಾವ ರೀತಿ ನಿರ್ಧರಿಸಬೇಕೋ ಆ ರೀತಿ ಮತ್ತು ಯಾರು ಭರಿಸಬೇಕೋ ಆ ವ್ಯಕ್ತಿ;

ಹೆಚ್) 20ನೇ ಪ್ರಕರಣದ ಉಪಬಂಧಗಳ ಮೇರೆಗೆ ನೀಡಿದ ಸಮನುಗಳನ್ನು ಜಾರಿ ಮಾಡುವ ರೀತಿ ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಸಮನು ಮಾಡಲಾದ ಅಥವಾ ವಿಚಾರಣೆ ಮಾಡಲಾದ ಯಾರೇ ವ್ಯಕ್ತಿಗೆ ಆದ ವೆಚ್ಚಗಳ ಮತ್ತು ಅಂಥ ವಿಚಾರಣೆಗೆ ಆನುಷಂಗಿಕವಾದ ಯಾವುದೇ ಇತರ ವೆಚ್ಚದ ಸಂದಾಯ;

ಐ) ಧಾರ್ಮಿಕ ಉದ್ದೇಶಗಳಿಗಾಗಿ ಇರುವ ನ್ಯಾಸಗಳನ್ನು ಮತ್ತು ವ್ಯವಹಾರಗಳ ನಿರ್ವಹಣೆಯಲ್ಲಿ ಅಥವಾ ವ್ಯವಹಾರಗಳನ್ನು ಮುಂದುವರಿಸುವುದರಲ್ಲಿ ತೊಡಗಿರುವ ನ್ಯಾಸಗಳನ್ನು ಅಧಿಕೃತ ನ್ಯಾಸಧಾರಿಯು ಒಪ್ಪಿಕೊಳ್ಳುವುದು; ಮತ್ತು

ಜೆ) ಈ ಅಧಿನಿಯಮದಲ್ಲಿ ಒಳಗೊಂಡಿರುವ ನಿಯಮಿಸಬೇಕೆಂದು ನಿರ್ದೇಶಿಸಿರುವ ಯಾವುದೇ ವಿಷಯ.

(3) ಈ ಪ್ರಕರಣದ ಉಪಬಂಧಗಳ ಮೇರೆಗೆ ರಚಿಸಿದ ನಿಯಮಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಆನಂತರ ಅವುಗಳನ್ನು ಈ ಅಧಿನಿಯಮದಲ್ಲಿ ಅಧಿನಿಯಮಿಸಿದ್ದಿದ್ದರೆ ಯಾವ ಪರಿಣಾಮವನ್ನು ಉಳ್ಳವುಗಳಾಗಿರುತ್ತಿದ್ದವೋ ಆ ಪರಿಣಾಮವನ್ನು ಉಳ್ಳವುಗಳಾಗಿರತಕ್ಕದ್ದು.

(3ಎ) ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ಮೇಲೆ ಆದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸತಕ್ಕದ್ದು;

4) ಈ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ

ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡು ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

31. **ಪ್ರಾಂತ್ಯಗಳಾಗಿ (ಪ್ರೆಸಿಡೆನ್ಸಿಗಳನ್ನು ವಿಭಜನೆ) ಎ.ಓ.1937ರಿಂದ ನಿರಸನಗೊಳಿಸಲಾಗಿದೆ.**

32. **ಭಾರತ ನೋಂದಣಿ ಅಧಿನಿಯಮ, 1908ರ ಉಪಬಂಧಗಳನ್ನು ಉಳಿಸಿಕೊಳ್ಳುವುದು.–** ಈ ಅಧಿನಿಯಮದಲ್ಲಿ ಒಳಗೊಂಡಿರುವುದು ಯಾವುದು, ಭಾರತ ನೋಂದಣಿ ಅಧಿನಿಯಮ, 1908ರ (1908ರ 16) ಉಪಬಂಧಗಳಿಗೆ ಬಾಧಕ ಉಂಟು ಮಾಡುತ್ತದೆ ಎಂದು ಭಾವಿಸತಕ್ಕದ್ದಲ್ಲ.

**32.ಎ ಉಳಿಸುವಿಕೆ.–** (1) 26ನೇ ಜನವರಿ 1950ರಂದು ಜಾರಿಗೆ ಬಂದ ಈ ಅಧಿನಿಯಮದ ತಿದ್ದುಪಡಿಗಳು ಆ ದಿನಾಂಕದಂದು ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಉಳಿದಿದ್ದ ಯಾವುದೇ ಕಾನೂನು ವ್ಯವಹರಣೆಗಳಿಗೆ ಬಾಧಕ ಉಂಟು ಮಾಡತಕ್ಕದ್ದಲ್ಲ ಅಥವಾ ಯಾವುದೇ ಸ್ವತ್ತು ಯಾರೇ ಅಧಿಕೃತ ನ್ಯಾಸಧಾರಿಯಿಂದ ಯಾರೇ ಇತರ ಅಧಿಕೃತ ನ್ಯಾಸಧಾರಿಗೆ ತಂತಾನೇ ವರ್ಗಾವಣೆಯಾಗುತ್ತದೆಯೆಂದು ಅರ್ಥೈಸತಕ್ಕದ್ದಲ್ಲ; ಆದರೆ ಈ ಪ್ರಕರಣದಲ್ಲಿ ಇರುವುದು ಯಾವುದು ಈ ಅಧಿನಿಯಮದ ಯಾವುವೇ ಇತರ ಉಪಬಂಧಗಳ ಅನುಸಾರವಾಗಿ ಯಾವುದೇ ಅಂಥ ಸ್ವತ್ತಿನ ವರ್ಗಾವಣೆಗೆ ಅಡ್ಡಿಯುಂಟು ಮಾಡುತ್ತದೆ ಎಂದು ಅರ್ಥೈಸತಕ್ಕದ್ದಲ್ಲ.

(2) 1950ರ ಜನವರಿ, 26ರಂದು ಜಾರಿಗೆ ಬಂದ ಈ ಅಧಿನಿಯಮದ ತಿದ್ದುಪಡಿಗಳು ಈ ಅಧಿನಿಯಮವನ್ನು ಬಿ – ಭಾಗದ ರಾಜ್ಯದಲ್ಲಿರುವ ಯಾರೇ ವ್ಯಕ್ತಿಗೆ ಅನ್ವಯಿಸುವುದರಿಂದ ಉದ್ಭವಿಸುವ ಮತ್ತು ಸದರಿ ದಿನಾಂಕದಂದು ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಉಳಿದಿರುವ ಯಾವುದೇ ಕಾನೂನು ವ್ಯವಹರಣೆಗಳಿಗೆ ಅಥವಾ ಈ ಅಧಿನಿಯಮದ ಮೇರೆಗೆ ಯಾವ ವ್ಯಕ್ತಿಯ ಯಾವ ಸ್ವತ್ತು ಅಥವಾ ಎಸ್ಟೇಟು, ಆ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅಧಿಕೃತ ನ್ಯಾಸಧಾರಿಯಲ್ಲಿ ನಿಹಿತವಾಗಿತ್ತೋ ಅಂಥ ಯಾರೇ ವ್ಯಕ್ತಿಯ, ಯಾವುದೇ ಸ್ವತ್ತಿನ ಅಥವಾ ಎಸ್ಟೇಟಿನ ನಿರ್ವಹಣೆ ಬಾಧಕವುಂಟುಮಾಡತಕ್ಕದ್ದಲ್ಲ ಮತ್ತು ಸದರಿ ತಿದ್ದುಪಡಿಗಳನ್ನು ಮಾಡಿದ್ದರೂ ಕೂಡ ಈ ಅಧಿನಿಯಮದ ಉಪಬಂಧಗಳು ಸಂದರ್ಭಾನುಸಾರ ಅಂತಹ ವ್ಯವಹರಣೆಗಳ ಅಥವಾ ಅಂಥ ಸ್ವತ್ತಿನ ಅಥವಾ ಎಸ್ಟೇಟಿನ ಸಂಬಂಧದಲ್ಲಿ ಅಗತ್ಯ ಮಾರ್ಪಾಟುಗಳೊಂದಿಗೆ ಅನ್ವಯವಾಗುವುದು ಮುಂದುವರಿಯತಕ್ಕದ್ದು.

**32ಬಿ. ರಾಜ್ಯಗಳ ಪುನರ್ ವಿಂಗಡಣೆಯ ಪರಿಣಾಮವಾಗಿ ಕೆಲವು ಅಧಿಕೃತ ನ್ಯಾಸಧಾರಿಗಳಿಗೆ ಸಂಬಂಧಿಸಿದ ವಿಶೇಷ ಉಪಬಂಧ.–** 1956ರ ನವೆಂಬರ್ 1 ರಂದು ಜಾರಿಗೆ ಬಂದ ಈ ಅಧಿನಿಯಮದ ತಿದ್ದುಪಡಿಗಳು, ಆ ದಿನಾಂಕದಂದು ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಉಳಿದಿದ್ದ ಯಾವುದೇ ಕಾನೂನು ವ್ಯವಹರಣೆಗಳಿಗೆ ಬಾಧಕವುಂಟುಮಾಡತಕ್ಕದ್ದಲ್ಲ, ಮತ್ತು ರಾಜ್ಯಗಳ ಪುನರ್ ವಿಂಗಡಣೆ ಅಧಿನಿಯಮ, 1956ರ (1956ರ 37) ಮೇರೆಗೆ ರಾಜ್ಯಗಳ ಪುನರ್ ವಿಂಗಡಣೆಯ ಪರಿಣಾಮವಾಗಿ ಅಥವಾ ಬಿಹಾರ ಮತ್ತು ಪಶ್ಚಿಮ ಬಂಗಾಳ (ಪ್ರದೇಶಗಳ ವರ್ಗಾವಣೆ) ಅಧಿನಿಯಮ, 1956 (1956ರ 40)ರ ನಿಮಿತ್ತ ಒಂದು ರಾಜ್ಯದ ಇಡೀ ಭಾಗವು ಅಥವಾ ಅದರ ಯಾವುದೇ ಭಾಗವು ಯಾವುದೇ ಇತರ ರಾಜ್ಯಕ್ಕೆ ವರ್ಗಾವಣೆಯಾಗಿದ್ದರೆ, ಆ ರಾಜ್ಯದ ಆ ರಾಜ್ಯಕ್ಷೇತ್ರದ ಅಂಥ ವರ್ಗಾವಣೆಯಿಂದಾಗಿ ಯಾವುದೇ ಸ್ವತ್ತು ಯಾರೇ ಅಧಿಕೃತ ನ್ಯಾಸಧಾರಿಯಿಂದ ಯಾರೇ ಇತರ ಅಧಿಕೃತ ನ್ಯಾಸಧಾರಿಗೆ ತಂತಾನೇ ವರ್ಗಾವಣೆಯಾಗಿದೆಯೆಂದು ಭಾವಿಸತಕ್ಕದ್ದಲ್ಲ. ಆದರೆ ರಾಜ್ಯಕ್ಷೇತ್ರದ ಅಂಥ ವರ್ಗಾವಣೆಯ ಕಾರಣದಿಂದಾಗಿ ಅಧಿಕೃತ ನ್ಯಾಸಧಾರಿಯಲ್ಲಿ ನಿಹಿತವಾಗಿದ್ದ ಆ ಇಡೀ ಸ್ವತ್ತು ಅಥವಾ ಅದರ ಯಾವುದೇ ಭಾಗವು ಮತ್ತೊಬ್ಬ ನ್ಯಾಸಧಾರಿಯಲ್ಲಿ ನಿಹಿತವಾಗಬೇಕೆಂದು, ಕೇಂದ್ರ ಸರ್ಕಾರಕ್ಕೆ ಕಂಡುಬಂದರೆ ಕೇಂದ್ರ ಸರ್ಕಾರವು ಆ ಸ್ವತ್ತನ್ನು ಆ ಮತ್ತೊಬ್ಬ ನ್ಯಾಸಧಾರಿಯಲ್ಲಿ ನಿಹಿತಗೊಳಿಸುವಂತೆ ನಿರ್ದೇಶನ ನೀಡತಕ್ಕದ್ದು ಮತ್ತು ಆನಂತರ ಅದು ಆ ಇತರ ಅಧಿಕೃತ ನ್ಯಾಸಧಾರಿಯಲ್ಲಿ ಮತ್ತು ಅವನ ಉತ್ತರಾಧಿಕಾರಿಗಳಲ್ಲಿ, ಈ ಅಧಿನಿಯಮದ ಮೇರೆಗೆ ಅವರಲ್ಲಿ ಮೂಲತಃ ನಿಹಿತಗೊಂಡಿದ್ದಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಸಂಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ನಿಹಿತವಾಗತಕ್ಕದ್ದು.

33. **(ನಿರಸನಗಳು) ನಿರಸನಗೊಳಿಸುವ ಅಧಿನಿಯಮ, 1927 (1927ರ 12) ರ ಪ್ರಕರಣ 2 ರಿಂದ ಮತ್ತು ಅನುಸೂಚಿಯಿಂದ ನಿರಸನಗೊಳಿಸಲಾಗಿದೆ.**

**ಅನುಸೂಚಿ:–** (ಅಧಿನಿಯಮಗಳನ್ನು ನಿರಸನಗೊಳಿಸಲಾಗಿದೆ) ಅದೇ ಅಧಿನಿಯಮದ 2ನೇ ಪ್ರಕರಣದಿಂದ ಮತ್ತು ಅನುಸೂಚಿಯಿಂದ ನಿರಸನಗೊಳಿಸಲಾಗಿದೆ.

* * * * *